ನೋಡಿ ಹೇಗ್ ಮಾತಾಡ್ತಾನೆ.. ಚೆನಾಗ್ ಬೆಳ್ಸಿದೀರಾ..

**SHRADDHA & DAD**
Ammaaa GEETHAAA

23. **INT. SURIS HOUSE HALL - LATER**

**APPA**
ಇದೊಂದು ಬಾಕಿ ಇತ್ತು SURI.. ಈಗ ಬೇರೆ ಅವ್ರು
ಮಾತಾಡ್ಲಿ ನಾವು ಹೇಗ್ ಬೆಳ್ಸಿದೀವಿ ನಿನ್ನ ಅಂತ..

SURI is about to respond,

**AMMA**
ನಾವು(stress) ಬೆಳ್ಸಿದೀವಾ.. ನೀವೆಲ್ಲಿದ್ರಿ ಅವ್ನು ಬೆಳಿಯೋವಾಗ..

SURI is taken aback. MOM and DAD look at each other.

**AMMA**
ನೀವಂತು family ಗೆ ಅಂತ ಯಾವತ್ತೂ ಇದ್ದಿಲ್ಲ.. ಈಗ ಯಾರೋ ನಮ್ familyಗೆ ಅವಮಾನ ಮಾಡಿದ್ರೆ, SURIನು ಕೇಳಿಸ್ಕೊಂಡ್ ಸುಮ್ನಿರಬೇಕಾ..

SURI'S DAD is really upset at this point,

**APPA**
ನಾನು familyಗೆ ಅಂತ ಏನು ಮಾಡಿಲ್ವಾ.. ಅಷ್ಟು ವರ್ಷ ಒಬ್ನೇ ಇದ್ದಿದ್ದು, ದುಡ್ಡಿದ್ದು, ಕಷ್ಟ ಪಟ್ಟಿದ್ದು, ಅದು ಯಾರಿಗೆ..

SHRADDHA'S DAD tries to intervene,

**DAD**
Sir ಹೋಗ್ಲಿ ಬಿಡಿ. ಅವ್ರು ಬೇಜಾರ್ ಅಲ್ಲಿ ಏನೋ ಹೇಳಿರ್ ಬೇಕು..

In the mean time SHRADDHA'S MOM is super angry,

**MOM**
GIRI.. ಅವ್ರು ನಮಿಗ್ insult ಮಾಡಿದ್ರೂ, ನೀನು ಅವ್ರಿಗೆ ಸಮಾಧಾನ ಮಾಡ್ತಿದೀಯಲ್ಲ.. Have you lost it..

SHRADDHA'S dad too gets furious,

**DAD**
ನೀನು... SURI ಥರ ನಿನ್ ಮಾತೆಲ್ಲ ಕೇಳೋ ಅವ್ರು ಯಾರು ಸಿಗೋಲ್ಲ ಅಂತ false expectations set ಮಾಡಿ, ಯುವ್ಳ್ ತಲೆ ಕೆಡಿಸ್ಸಿರೋದು... ಅದಿಕ್ಕೆ ಇವತ್ತು ಇದೆಲ್ಲ ಆಗ್ತಿರೋದು..

**MOM**
ಏನ್ ಮಾತಾಡ್ತಿದೀಯಾ GIRI.. ನೀನು ಹೇಳಿಲ್ವ..
ಅವ್ರ್ family ನಮ್ಮಷ್ಟೇನೂ classy ಇಲ್ಲ, ಹುಡುಗ
simple ಇದಾನೆ.. SHRADDHA ಹೇಳಿದ್ ಮಾತು
ಕೇಳ್ತಾನೆ ಅದು ಇದು ಅಂತ..

**DAD**
ಇಲ್ಲ ನಾನು ಆ ಥರ ಹೇಳಿಲ್ಲ..

In the meanwhile AMMA and APPA too are arguing amongst themselves.

**APPA**
ದೂರ ಇದ್ರೆ ಎಲರಿಗೂ ಒಳ್ಳೇದ್ ಆಗುತ್ತೆ ಅಂತ ಇಬ್ರು
ಒಟ್ಟಿಗೆ ತೀರ್ಮಾನ ತಗೊಂಡಿದ್ ಅಲ್ವ.. ಈಗ
ನಾನೇನೋ ನನ್ ಆಸೆ ತೀರ್ಸ್ಕೊಳೋಕೆ ಹೋದಂಗೆ
ಮಾತಾಡ್ತಿದೀಯಾ..

**AMMA**
ಹಾಗ್ ಅನ್ಬಿಟ್ಟು ಇಪ್ಪತ್ ವರ್ಷ ಮನೆ ಮಕ್ಳು ಜವಾಬ್ದಾರಿ
ನಿಭಾಯ್ಸಿದ್ದು ನಾನಲ್ವ..

Parallelly MOM and DAD too are fighting and at one point, PLUMBER BABU who has headphones on, carrying his toolkit walks into another room humming another song. And everyone stops arguing and watch him go. He is oblivious to the commotion happening.

Once he has left they continue arguing again. The argument is reaching a peak.

SLOMO

**DAD**
ಯವಗ್ಲು ಹೀಗೆ ಅಲ್ವ. Blowing everything
out of proportion.

**MOM**
Shut up Giri.

**DAD**
ಬೆರೆ ಯವರ ಮನೇಲಿದೀವಿ, mind your words.

**MOM**
As usual, pleasing people. ಯವಗ್ಲು
ಬೆರೆಯವರ ಬಗ್ಗೆ ಯೊಚ್ನೆ.

**DAD**
ನಿನ್ನ ನೊಡ್ಕೊಂಡು Shraddha ಕೂಡ ಹೀಗೆ ಮಾತಡ್ತಾಳೆ.

**MOM**
Giri ಇಲ್ಲಿಗೆ ಬರಕ್ಕೆ ಮುಂಚೆನೆ ಹೆಳಿದ್ದೆ ನಿನಗೆ, ಅವರು
ಹೆಗ್ ಹೇಗೊ ಮಾತಡಿದ್ರೆ ನಾನು ಸುಮ್ನಿರಲ್ಲ ಅಂತ.
ನಿನಿಗಂತು ಮಾತಡಕ್ ಬರಲ್ಲ. ನಾನ್ ಮಾತಡಿದ್ರೆ,
ಅದಕ್ಕು ಬಾಯಿ ಹಾಕ್ತಿಯ.

**APPA**
ನೀನು SURI ನಿಮ್ ಇಬ್ಬರಿಂದ ನೇ ಈ ಮನೆ ಹೀಗ್
ಆಗಿರೋದು..

**AMMA**
ಅಂತದ್ ಏನ್ ಮಾಡಿದೀವಿ ನಾನು SURI ನಿಮಿಗೆ..
ನಿಮ್ ಪಾಡಿಗೆ ನಿಮ್ಮನ್ ಇರೋಕೆ ಬಿತ್ತಿಲ್ವಾ ತಲೆ ಹಾಕ್ತೀವಾ
ನಿಮ್ ವಿಷ್ಯಕ್ಕೆ..

**APPA**
ಹೌದು ತಲೆ ಹಾಕೋಲ್ಲ.. ಬೇಡವಲ್ಲ ನಿಮ್ ಇಬ್ರಿಗೂ
ನಾನು.. ಹೊರಗಿನವನ್ ಆಗ್ ಬಿಟ್ಟಿದೀನಲ್ಲ ನನ್
ಮನೇಲಿ ನಾನೇ..

**AMMA**
ಹೌದ್ ಹೌದು ನಿಮ್ ಸೇವೆ ಮಾಡೊದಲ್ದೆ ನಿಮ್ ಅಕ್ಕನ
ಸೇವೆ ಮಾಡಿನೂ ಇದನ್ ಬೇರೆ ಹೇಳಿಸ್ಕೊ ಬೇಕೋ..

SURI'S mom and dad arguing with each other. ATTHE has started weezing. And is breathing with great difficulty. But nobody is noticing. SHRADDHA'S mom and DAD also are arguing with each

other.

We go close to SURI(vertigo). He is sitting with his head held down controlling his anger. We go close to SHRADDHA(vertigo). She too is seeing her parents argue and is getting angry.

At one point both SURI and SHRADDHA together,

**SURI & SHRADDHA**
ಸಾಕು ನಿಲ್ಲಿಸ್ತೀರಾ ಎಲ್ರು.. Can everybody calm
the fuck down..

Everyone goes silent. We hear ATTHEs weezing loudly. She pats APPA angrily to get the pump.

**APPA**
Ayyo...ತಂದೆ ಅಕ್ಕ..

APPA runs to her room as she continues weezing. Everyones looking at her almost panicked. APPA gets her a pump and gives it to her. She takes a few puffs and calms down. Everyone is relieved.

**ATTHE**
ಅದು ನನಿಗೆ 20 ವರ್ಶದಿಂದ ಅಸ್ತಮಾ ಇದೆ ಅಲ್ವಾ,
sudden ಆಗಿ ತುಂಬ ಜನ ಸೇರಿದ್ರೆ, ಉಸಿರಾಟ ಕಷ್ಟ
ಆಗತ್ತೆ ನನಿಗೆ.

Then looks towards MOM

**ATTHE**
ಮತ್ತೆ ನಿಮ್ perfume ಬೇರೆ strong ಇದೆ ಅಲ್ವ..

There is a brief silence where everyone is still comprehending all that has happened. We see all of seven of them comprehending their behavior and almost ashamed of their behavior

(Split screen of all eight of them on then sofa. SURI on one end SHRADDHA on the other. The people in between disappear and interval appears.)

24. **INT. SURIS HOUSE HALL - LATER**

SURI'S dad's phone rings (A ringtone which stands out). Everybody looks at him. He takes his phone out and with an embarrassed smile answers the call. Looks to the screen. He cant hear the other person clearly..

**APPA**

Hello SATHYA MURTHY speaking. Haan RAVI ಒಂದ್ ನಿಮಿಶಾಪ.. Network ಇರೋ ಕಡೆ ಹೋಗ್ತೀನಿ.

He walks to the dining room pulls a particular chair in a corner sits and

**APPA**

Haan RAVI ಈಗ ಕೇಳಿಸ್ತಿದೆ ಹೇಳು..

SHRADDHA'S MOM and DAD look at each other in wonder when this whole thing happens.

SHRADDHA gets up. She looks angry.

**SHRADDHA**

I need to use the washroom.

SURI gets up and pointing in the direction,

**SURI**

ಆ ಕಡೆ ಇದೆ.

He walks to guide SHRADDHA,

**SHRADDHA**

ನಾನೇ ಹುಡ್ಕೋತೀನಿ.

**SURI**

ಅಲ್ಲೇ ಮುಂದೆ, right ಅಲ್ಲಿದೆ.

CUT TO

25. **INT. BATHROOM1 - EVENING**

A frustrated SHRADDHA walks in to the washroom. PLUMBER BABU

is inside fixing something. He has his headphones on and is still jiving his head to some Kannada song. He looks at her smiles and continues his work,

SHRADDHA is frustrated walks out and finds SURI standing right there.

**SURI**

ನನ್ room ಅಲ್ಲಿ ಒಂದ್ bathroom ಇದೆ. ಅಲ್ಲಿಗ್

ಹೋಗು..

She walks off without responding.

CUT TO

26. **INT. BATHROOM2 - EVENING**

SHRADDHA walks in to the bathroom. She looks exhausted. She looks at herself in the mirror and is almost in tears. She washes her face. Looks at herself again and is in contemplation. She has her phone in her hand.

She types a text to SURI 'I am sure I don't want to marry you'. Then deletes it. She then types

FROM SHRADDHA TO SURI
What are we doing SURI. We both should be talking. Not everybody else. Our parents are behaving like jerks and you are playing along.

CUT TO

27. **INT. SURIS HOUSE HALL - EVENING**

SURI'S phone is on the table. Its vibrating but he is not picking up the phone.

SURI'S dad is still on the phone.

**APPA (IN THE BACKGROUND)**

aye apply ಮಾಡೋ.. ಇದು dmartಥರಾ ನೇ..

ipo ಓಪನ್ ಆದಾಗ, ಬರಿ ಇನ್ನೂರ್ ರೂಪಾಯಿ ಇತ್ತು..

ಈಗ ಮೂರ್ ಸಾವಿರ.. ಇದು ಹಾಗೆ ಆಗೋದು..

miss ಮಾಡ್ಲೆ ಬೇಡ..

(From the conversation its evident it is something related to share market and day trading.)

**ATTHE (MURMURING)**

ಇದಕ್ಕೇನ್ ಕಮ್ಮಿ ಇಲ್ಲ. 3 ಲಕ್ಷ ಕಳ್ಕೊಂಡು ಸಮಾಧಾನ ಆಗಿಲ್ಲ ಅನ್ಸುತ್ತೆ..

SHRADDHA is back. She is looking at SURI. She is waiting for a response from him but SURI is not even looking at her.

SHRADDHA'S dad curious on hearing SURI'S dad speak. He looks towards SURI.

**DAD**

Share businessಆಆ? ಯಾರ್ ಜೊತೆ ಮಾತಾಡ್ತಿದಾರೆ

**SURI**

ಹ್ಞೂ.. ದಿನ way2money ಗೆ ಹೋಗ್ತಾರೆ. ಅಲ್ಲಿನ ಫ್ರೆಂಡ್ ಯಾರೋ ಇರ್ಬೇಕು.

SURI'S dad has finished his call and he has overheard SHRADDHA's dad enquiring SURI.

**DAD**

ಏನ್ sir share business ಎಲ್ಲ ಮಾಡ್ತೀರಾ

SHRADDHA is still looking at SURI. But he is still not looking at his phone.

SURI'S DAD in a tone of superiority and trying to sound cool,

**APPA**

ಹಾಂ ಹೀಗೆ... Free ಇರ್ತೀನಲ್ಲ. ಸ್ವಲ್ಪ ತಲೆಗೆ ಕೆಲಸ ಕೊಟ್ಟಂಗೂ ಆಗುತ್ತೆ.

SURI and AMMA look at each other. SHRADDHA'S dad is impressed.

**AMMA**

ಹ್ಞೂ ಹೌದು. ಹಾಗೆ free ಆಗೇ 3 ಲಕ್ಷ retirement ದುಡ್ಡು ಕಳ್ಕೊಂಡ್ರು..

A disappointed SURI,

**SURI**
ಅಮ್ಮ ಈಗ ಅದೆಲ್ಲ ಬೇಕಾ.

SURI'S phone rings. He picks his phone up and walks to the table for network. SHRADDHA is still looking at him as he walks past her.

**DAD (OFFSCREEN)**
share business ಅಂದ್ರೆ ಸಾಕು, ಎಲ್ಲ ಈ ಥರಾ ಕಥೆಗಳೇ ಹೇಳ್ತಾರಲ್ಲ sir

**APPA (OFFSCREEN)**
ಇಲ್ಲ sir ನಾನೊಂದ್ ಕಥೆ ಹೇಳ್ತೀನಿ ಕೇಳಿ.. ಮೊನ್ನೆ ತಾನೇ news channel ಅಲ್ಲಿ ನೋಡ್ದೆ sir.. ಅವನ್ಯಾರೋ ಒಬ್ಬ ಅವ್ನ್ ಮಾಮ್ಮಕ್ಕಿಗೆ ಅಂತ 20 ಸಾವಿರ mrf shares ಬಿಟ್ ಹೋಗಿದ್ನಂತೆ.. ಅಂದ್ರೆ 130 ಕೋಟಿ.. ನಮ್ ತಾತನು ಇದಾನೆ sir, ಜೀವನ ಇಡೀ ಹೋಗೆ ಸೊಪ್ಪು ಹಾಕೊದೊಂದು ಬಿಟ್ರೆ ಇನ್ನೇನು ಮಾಡಿಲ್ಲ..

28. **INT. DINING ROOM - EVENING**

**SURI**
ಹೌದು sir ಅದೇ ಮನೆ. ಮೇಲ ಬನ್ನಿ.

SURI sees SHRADDHA'S message. He reads it and then looks at her. SHRADDHA too is looking at him with sad eyes.

29. **INT. SURIS HOUSE HALL - EVENING**

SURI'S mom has overheard SURI'S conversation,

**AMMA**
ಏನ್ order ಮಾಡಿದಿಯೋ..

**SURI**
ಆ ಸೇಟು ಅಂಗ್ಡಿ ಇಂದ jilebi order ಮಾಡ್ದೆ.

**AMMA**
Ayyoo.. ಹೇಳಿದ್ರೆ ನಾನೇ ಮಾಡಿ ಕೊಡ್ತಿದ್ನಲ್ಲೋ.
ಹೇಗಿದ್ರು ನಾಳೆ carrierಗೆ ಸ್ವೀಟ್ ಮಾಡ್ ಬೇಕಿತ್ತು.

**SURI**
ಇಲ್ಲ.. SHRADDHA,ಒಂದ್ ಸತಿ, ಜಿಲೇಬಿ ಇಷ್ಟ ಅಂತ
ಹೇಳಿದ್ಲು, ಅದಿಕ್ಕೆ ತರ್ಸದೆ.

AMMA smiles at SURI like teasing him.

**AMMA**
Oh!! ಹೌದ

SHRADDHA is moved by SURI'S gesture. DOOR bell rings. SURI walks to the door opens the door and collects the package. He collects the package and starts walking towards the kichen. As he is walking,

**SURI**
SHRADDHA can you come help me.

**DAD**
ಹೋಗು help ಮಾಡು. ಈ ಚಿಕ್ಕ
misunderstandings ಎಲ್ಲ ಇದ್ದಿದ್ದೇ.. MUMBAIಗೆ
ಹೋದ್ಮೇಲೆ ನಾವ್ಗಳು ಇರೋಲ್ಲ.. ನೀವೇ ಮಾತಾಡಿ ಸರಿ
ಮಾಡ್ಕೋ ಬೇಕು..

SURI hears MUMBAI and is shocked,

**SURI**
MUMBAI aa??

SHRADDHA makes 'what did you do face' and looks at DAD. SURI looks to SHRADDHA hoping for an answer. She looks to him like she doesn't have an answer. SURI is sad, confused and walks away. SHRADDHA is sad. She gets up and follows him.

SURI'S mom and dad have not heard about MUMBAI. SHRADDHA'S DAD trying to distract them,

**DAD**
ಏನೋ carrier ಅಂದ್ರಲ್ಲ. ಯಾರಿಗೆ.. SURI
carrier ತಗೊಂಡ್ ಹೋಗ್ತಾನ officeಗೆ

AMMA is just about to answer and APPA interrupts. He answers. AMMA is pleasantly surprised when APPA speaks for her,

**APPA**
Aye ಅಲ್ಲ ಅಲ್ಲ. ಇವಳು tiffin service
ನಡಿಸ್ತಾಳೆ.. ಅದನ್ನ ಹೇಳಿದ್ದು. carrier ಅಂತ.

SHRADDHA'S DAD nodding his head like he is impressed,

**DAD**
Oh ಹೌದ.

SURI'S mom smiles.

**APPA**
Madam ನೀವು.. HCL ಅಲ್ಲಿ work ಮಾಡೋದಲ್ವ..

**MOM**
ಹೌದು.. HCL. ಇಲ್ಲೇ GLOBAL VILLAGE IT
PARK ಅಲ್ಲಿ

**APPA**
ಹಾಂ ಅದೇ!! ಯುವ್ಗ್ tiffin box ಹೋಗುತ್ತೆ
HCLಗು.. global village ಅಲ್ಲಿ.

SHRADDHA'S DAD looks AMMA nods a yes.

SHRADDHA'S MOM like she is not at all interested,

**MOM**
ಅದು.. ನನಿಗೆ ಗೊತ್ತಿಲ್ಲ. ನಾನು legal services
team ಅಲ್ಲಿರೋದು. ಅದನ್ನೆಲ್ಲಾ house keeping
ಅವ್ರು ನೋಡ್ಕೋತಾರೆ.

**APPA**
Oh ಹೌದ.. ಸರಿ ಬಿಡಿ..

**DAD**
ಎಷ್ಟ್ box ಹೋಗುತ್ತೆ ಒಂದ್ ದಿನಕ್ಕೆ.

SURI'S MOM thinks for a couple of seconds and then,

**AMMA**
ಒಂದ್ 250 ರಿಂದ 300.

SHRADDHA'S DAD is awestruck. So is her mom now,

**MOM**
ಅಯ್ಯಪ್ಪಾ.. ಸಿಕ್ಕಪಟ್ಟೆ ಕೆಲಸ ಅಲ್ವ ಅದು.

**APPA**
ಹೌದು ಹೌದು... ತುಂಬ ಜನ ಕೆಲಸ ಮಾಡ್ತಾರೆ..

SHRADDHA'S DAD is mighty impressed. looking towards his wife

**DAD**
Wow we have an entrepreneur amidst us.

SURI'S mother smiles shyly.

**APPA**
Sir ನಿಮ್ಮ legal practice ಹೇಗ್ ನಡೀತಿದೆ...

**DAD**
ನಡೀತಿದೆ Sir. ಪರ್ವಾಗಿಲ್ಲ..

He points to SURI'S mother and,

**DAD**
ಇವರಷ್ಟೇನು busy ಇಲ್ಲ ಬಿಡಿ..

Everyone laughs at his humor,

**MOM**
Haan... ಇವರು ಒಂದು, book ಬರಿಯೋ
ಪ್ರಯತ್ನದಲ್ಲಿದಾರೆ..

SHRADDHA'S DAD feels a little shy when his wife mentions the book.

**APPA**
Oh sir. Super sir. book ಎಲ್ಲ
ಬರಿತಿದೀರಾ.. ಎಂತರ ಬಗ್ಗೆ

A slightly embarrassed SHRADDHA'S DAD,

**DAD**
Ayyo sir.. ಈಗ just start ಮಾಡಿದೀನಿ.
ಅದು bookಇಗೋಸ್ಕರ research ಕೆಲಸನಾ..
Law related ಏನೋ ಬರೀಬೇಕು ಅನ್ಕೊಂಡಿದೀನಿ
sir. ನೋಡೋಣ ಏನ್ ಆಗುತ್ತೆ.

**APPA**
Ohh.. ok ok

CUT TO

30. **INT. KITCHEN - EVENING**

In the kitchen SHRADDHA and SURI lay the jilebi boxes down. SURI is not looking at her. SHRADDHA is trying to make eye contact but he is not looking at her. As SURI is placing the jilebis in the bowl, he drops one on the floor. he quickly bends down and picks it up and takes a bite. He lifts his head up and sees SHRADDHA looking at him with mild disgust,

**SURI**
5 second rule ಗೊತ್ತಿಲ್ವ

SHRADDHA makes a questioning face. Doesn't say anything continues doing what she was doing. SURI throws the fallen jilebi into the dustbin and gets back to what he was doing. SHRADDHA notices and there is a smile on her face.

**SHRADDHA**

ನಿನ್ ಮೇಲ್ ನಂಬಿಕೆ ಇರೋದ್ರಿಂದ, ನನ್ ಮನೇಲಿರೋ
ಕೆಲವ್ problemsನ share ಮಾಡ್ಕೊಂಡಿದ್ದು.
ನೀನ್ ಹೀಗ್ ಮಾಡ್ತಿಯಾ ಅಂತ ಅನ್ಕೊಂಡಿರ್ಲಿಲ್ಲ
SURI.

**SURI (SARCASTIC TAUNT)**

ohhh ನಂಬಿಕೆ ಇರೋದಕ್ಕೆ share ಮಾಡಿದ್ದಾ..
ಅದೇ ಈ mumbai ವಿಷ್ಯ share ಮಾಡಿದ್ಯಲ್ಲ..
ಹಾಗಾ? ..

SHRADDHA doesn't say anything. She has her head held down. SURI notices she is sad,

**SURI**

ನಿಮ್ಮಮ್ಮ ಶುರು ಮಾಡಿದ್ದು SHRADDHA. ಅವ್ರು ನಮ್ಮಪ್ಪ
ಅಮ್ಮನ್ನ insult ಮಾಡಿದ್ರೂ ನಾನೇನು ನೋಡ್ಕೊಂಡ್
ಸುಮ್ನೆ ಕೂತಿರಬೇಕಾ.

SHRADDHA understands SURI'S anger. She doesn't loose her cool,

**SHRADDHA**

ಎಲ್ರು ಕೂತು ಮಾತಾಡಿದ್ರೆ ಅರ್ಥ ಮಾಡ್ಕೊತೀರಾ,
ಏನೋ ಒಂದ್ solution ಸಿಗುತ್ತೆ ಅನ್ಕೊಂಡ್ರೆ, ಇಲ್ಲಿ
ಯಾರಿಗೂ ಕೇಳೋ patience ಇಲ್ಲ. ಅವರಿಗಿಲ್ಲ ಸರಿ
ನಿನಿಗಾದ್ರೂ ಇರ್ಬೇಕಲ್ವಾ SURI..

SURI understands SHRADDHA is really upset.

**SURI**

SHRADDHA ಏನ್ ನಡೀತಿದೆ ಅಂತಾನೆ ಗೊತ್ತಾಗ್ತಿಲ್ಲ
ನನಿಗೆ.. ಒಂದ್ ಎರಡು ದಿನ ಮುಂಚೆ ತನಕ ಎಲ್ಲ ಸರೀಗೆ
ಇತ್ತು. ಮತ್ತೆ ಈಗ ಇದ್ದಕೆ ಇದ್ದಾಗೆ.. MUMBAI ಅಂತ
ಹೇಳೇ ಇದೆಲ್ಲನಾ..

Takes a pause and with sad eyes,

**SURI**
ಅದರ ಬಗ್ಗೆ ಹೇಳ್ಲೂ ಇಲ್ಲ ನೀನ್ ನನಿಗೆ..

By now they have served all the snacks that came into bowls. They both have picked up separate trays and are just about to walk out.

**SHRADDHA**
MUMBAI ಒಂದೇ reason ಅಲ್ಲ SURI..
Actually ಏನೂ ಸರೀಗ್ ಇರ್ಲಿಲ್ಲ. ನೀನ್ ಎಲ್ಲ
ಸರೀಗ್ ಇದೆ ಅಂತ ಅನ್ಕೊಂಡಿದೀಯ, ಅಷ್ಟೇ..
ಒಳ್ಳೇದ್ ಆಯಿತು ಈ meeting ಆಗಿದ್ದು.

In a taunting manner

**SHRADDHA**
ಎಲ್ರ ಬಣ್ಣ ಬಯಲಾಯಿತಲ್ಲ..

SURI is pissed at SHRADDHA'S statement,

**SURI**
ಹೌದು ಒಳ್ಳೆದಾಯಿತು.. Atleast ನಮ್ family
ನಿಮ್ family ಥರ fake ಅಲ್ಲ ಅನ್ನೋದು
ಗೊತ್ತಾಯಿತಲ್ಲ.. ಸಾಕು.

SHRADDHA is sad. She is really hurt by SURI'S words but doesn't respond.

**SURI**
ಈಗೇನು ನಿನಿಗೀ ಮದುವೆ cancel ಆಗ್ಬೇಕು ಅಷ್ಟೇ
ಥಾನೆ. ಸರಿ.. ನನಿಗೂ ಬೇಕಾಗಿಲ್ಲ.. ನಡೀರಿ..
jilebi ತಿಂದು, ನೀನು ನಿಮಪ್ಪ ಅಮ್ಮ ಹೊರಡಿ..

SURI picks up the tray and starts walking out even before an already hurt SHRADDHA can process what he has just said,

**SHRADDHA**
SURI.. ಒಂದ್ ನಿಮಿಶ.. cancel ಅಂದ್ರೆ,
ನಾನು..

31. **INT. SURIS HOUSE HALL - EVENING**

SURI doesn't wait to listen to her. She too picks up a bowl and walks out. Everybody in the hall is staring at them. They both realize everyone heard them arguing inside.

They both just place the trays on the table.

**SURI**
ತಗೋಳಿ.. ಎಲ್ರು ತಗೋಳಿ.

SURI'S father trying to ease the situation,

**APPA**
ಇಲ್ಲಿ sir.. ತಗೋಳಿ

Picks two bowls for SHRADDHA'S DAD and MOM. The other are helping themselves. ATTHE looks to SURI,

**ATTHE**
aye SURI.. ನಂಗೊಂದ್ ಕೊಡೊ

SURI hands a bowl to ATTHE and walks out. SHRADDHA notices SURI walk out. She looks at everyone. Everybody has an awkward expression on their face. APPA signals her to go after him. So SHRADDHA follows him.

Everybody in the house is munching on the jilebis. SHRADDHA'S MOM gets a call. She answers the call,

**MOM**
Hello. Yeah. RAGINI I cant hear you. Your voice is breaking.

SURI'S DAD to SHRADDHA'S MOM,

**APPA**
ಈ room ಅಲ್ಲಿ signal ಸ್ವಲ್ಪ weakಉ. ಆ dining table ಹತ್ರ ಹೋಗಿ ಕೂತ್ಕೋಳಿ ಸಿಗುತ್ತೆ..

**MOM**
Ohh ok.

**APPA**
ನಾವೆಲ್ಲಾ call ಬಂದ್ರೆ ಅಲ್ಲಿ ಕೂತ್ಕೊಂಡೆ
ಮಾತಾಡೋದು.

Laughs,

**APPA**
Oh ನಮ್ ಮನೇಲಿ ಜಗಳಗಳೇ ಆಗಿವೆ ಕೆಲವ ಸತಿ.
ಒಟ್ಟೊಟಿಗೆ phone ಬಂದಿರೋದಕ್ಕೆ..

He laughs loudly. SHRADDHA'S MOM and DAD smile awkwardly and they exchange glances. SHRADDHA'S MOMs phone rings again and she goes towards the dining table. She pulls a chair to sit.

**APPA**
ಅದಲ್ಲ... ಪಕ್ಕದ್ದು..

SHRADDHA'S MOM takes the other chair and sits.

**APPA**
haan ಅದೇ.

She answers the call and she can hear clearly. She smiles and shows a thumbs up to SURI'S dad.

32. **INT/EXT. STAIRS - DAY**

SURI and SHRADDHA are walking up the stairs to the terrace and as they are walking,

**SHRADDHA (MURMURING)**
ನೀನೆ ಬೈದು.. ನೀನೆ ಕೋಪಾನೂ ಮಾಡ್ಕೋ..

**SURI**
ಹೌದು.. ತಪ್ಪೆಲ್ಲಾ ನಂದೇ..

They reach the terrace. SURI pushes the door open and makes way for SHRADDHA. Its nice terrace with a lot of plants. Almost like a terrace garden and a cozy little swing there. SHRADDHA is taken by surprise.

**SHRADDHA**
Oh my god SURI. ನಿಮ್ terrace ಇಷ್ಟು ಚೆನ್ನಾಗಿದಿಯ.

SURI smiles.

**SURI**
ನನ್ನ ಮದುವೆ ಮಾಡ್ಕೊಂಡಿದ್ರೆ, daily ಬೆಳಿಗ್ಗೆ ಇಲ್ಲಿ ಕೂತು coffee ಕುಡಿ ಬಹುದಿತ್ತು..

**SHRADDHA (SARCASTICALLY)**
Haha. Very funny.

SURI is still holding the door,

**SURI**
SHRADDHA ಈ door ಸ್ವಲ್ಪ ಹಿಡ್ಕೋ. ಹುಷಾರು ಬಿಡಬೇಡ..

SHRADDHA is holding the door. SURI goes towards the garden to go fetch a stone. As SHRADDHA is holding she notices a squirrel come sit on one of the bigger plants in the terrace. An excited SHRADDHA lets go off the door and walks towards the plant.

33. **INT/EXT. TERRACE - EVENING**

SLOMO The door slowly starts to slide close. SHRADDHA completely oblivious to the door is slowly walking towards the squirrel. SURI at one point sees SHRADDHA and is confused why she is not at the door. He then looks at the door which is slowly closing. SURI screaming,

**SURI**
SHRADDDHAAAA dooooor..

SURI running towards the door. SURI reaches the door but it shuts with a thud. The squirrel too runs away at the thud. An angry SURI turns to SHRADDHA and an angry SHRADDHA turns to SURI.

**SURI**
ಒಂದ್ ಕೆಲಸ ಹೇಳಿದ್ದು ಅದನ್ನು ಸರೀಗೆ ಮಾಡೋಕ್ ಆಗೋಲ್ಲ ಅಲ್ವ ನಿಂಗೆ. ಆ lock ಸರೀಗಿಲ್ಲ.. Door close ಆದ್ರೆ ಓಪನ್ ಆಗೋಲ್ಲ. ಸಿಕ್ಕಹಾಕೊಂಡ್ವಿ ಈಗ ಇಲ್ಲೇ..

**SHRADDHA**
ನಿನಿಗೆ ಒಂದ್ ಎರಡ್ ನಿಮಿಷ silent ಆಗಿರೋಕೆ ಆಗೋಲ್ಲ ಅಲ್ಲ. It was a so cute..

An irritated SURI,

**SURI**
ನಾನ್ ಹೇಳೋದೆಲ್ಲ joke ಅಲ್ಲ ನಿನಿಗೆ. Trapped film ನೋಡಿದೀಯ. ಅದ್ರಲ್ಲಿ ಹೇಗ್ ಒಂದ್ ಮನೆ ಅಲ್ಲಿ ಸಿಖಾಕೊಂಡು almost ಸತ್ತೇ ಹೋಗ್ತಾನೆ ಅವ್ನು.

SHRADDHA'S serious face slowly turns into laughter. With eyes wide open as to what SURI is talking,

**SHRADDHA**
SURIIIIII ಆ film ಅಲ್ಲಿ ಅವನೊಬ್ಬನೇ, MUMBAIಲಿರೋ ಯಾವ್ದೋ ದೊಡ್ಡ buildingಅಲ್ಲಿ, phone ಇಲ್ದೆ, ತಿನ್ನೋಕೆ, ಕುಡಿಯೋಕೆ ಏನು ಇಲ್ದೆ ಸಿಕ್ಕಿಹಾಕೊಂಡಿರ್ತಾನೆ.. ಇದು ಅದು ಒಂದೇ ಅಲ್ಲ ನಿನಿಗೆ..

SURI has a sad smile.

**SURI**
ನಿನ್ mind already mumbaiಲಿರೋ ಹಾಗ್ ಇದೆ..

SHRADDHA'S smile fades away. She doesn't respond.

CUT TO

SURI is sitting on a make shift chair and SHRADDHA is sitting

on a hammock/swing. The sun is setting behind them and the hustle bustle of the streets around can be heard.

**SURI**
ನಿನಿಗ್ mumbaiಗೆ ಹೋಗ್ಬೇಕು.. ಈ ಥರ ಒಂದ್
offer ಸಿಕ್ಕಿದೆ, ಅಂತ ಹೇಳ್ ಬಹುದಿತ್ತಲ್ವಾ
SHRADDHA..
ನಮ್ ಮದುವೆ ಆದ್ ಮೇಲೂ ನೀನ್ ಹೋಗ್
ಬಹುದಿತ್ತಲ್ವಾ MUMBAIಗೆ..

SHARDDHA is silent.

**SURI**
ನೀನಾಗ್ ನೀನೆ cancel ಅಂತ decide ಮಾಡ್
ಬಿಟ್ರೆ? at least discuss ಮಾಡ್ ಬೇಕಲ್ವಾ?

**SHRADDHA**
SURI.. ನನಿಗೇ, MUMBAI ವಿಷ್ಯ ಗೊತ್ತಾಗಿ ಎರಡ್
ದಿನಾನೂ ಆಗಿಲ್ಲ.. ಎಷ್ಟ್ ಸತಿ ಹೇಳೋದು ನಿನಿಗೆ,
MUMBAI ಒಂದೇ ಕಾರಣ ಅಲ್ಲ.. MUMBAI offer
ಇರ್ಲಿಲ್ಲ ಅಂದ್ರು ಇದೆ ಆಗ್ತಿದಿದ್ದು.

A moment of silence,

**SHRADDHA (MURMURING)**
Its not your fault SURI. Its me.

**SURI (IMITATING)**
Please SHRADDHA ಈ cliched dialogue
ಎಲ್ಲ ಹೊಡಿ ಬೇಡ. (Dramatic imitation)
'Its not you its me. You will find
someone better.' ನಾನೇನು 2nd puc ಹುಡ್ಗ
ಅಲ್ಲ.

SHRADDHA with her head held down almost in a hush hush tone.

**SHRADDHA**
ಮತ್ತೆ ಅಶ್ಟಕ್ಕೂ.. ನಾನೇನು cancel ಅಂತ ಹೇಳಿಲ್ಲ.

SURI hears that. Doesn't say anything. Silence between the two,

**SURI**
ನನ್ friend MADHU ನೆನ್ಪಿದಾನ? ಅದೇ mantri mall ಅಲ್ಲಿ ಸಿಕ್ಕಿದ್ನಲ್ಲಾ ಒಂದ್ ಸತಿ.

SHRADDHA thinks for a second and,

**SHRADDHA (REMEMBERING)**
ಹಾಂ ಹಾಂ ನೆನ್ಪಿದಾನೆ.. ಅದೇ ಗಿರಿನಗರ.. AUDI Q5..

**SURI**
ಹಾಂ ಅವ್ನೆ. (imitating shraddha) 'ಏನು ZAARAನಲೆಲ್ಲ shopping ಮಾಡೋ friends ಇದಾರಾ ನಿನಿಗೆ' ಅಂತ ಕೇಳಿದ್ಯಲ್ಲ ನೀನು..

SHRADDHA folding her hands,

**SHRADDHA**
ಅಪ್ಪ ತಂದೆ/SURIIII.. ಗೊತ್ತಾಯಿತು ಮುಂದಕ್ಕೆ ಹೇಳು.

**SURI**
ಅವ್ನ್ ತಾತ ಮುತಾತಂದಿರೆಲ್ಲ ಆವಲಹಳ್ಳಿಲಿ ದೊಡ್ಡ ಜಮೀನ್ದಾರ್ರು.. ಆಗಿನ ಕಾಲದಲ್ಲಿ.. ಈಗದು posh GIRINAGARA . ಅವ್ನಿಗೆ ಎಷ್ಟು ಆಸ್ತಿ ಬಿಟ್ಟು ಹೋಗಿದಾರೆ ಅಂದ್ರೆ, ಅವ್ನು ಜೀವನ ಇಡೀ ಏನು ಕೆಲಸ ಮಾಡೋದೇ ಬೇಡ.. ಸುಮ್ನೆ ಕಾಸ್ ಖರ್ಚ್ ಮಾಡ್ಕೊಂಡ್ ಇದ್ರೂನು ಖಾಲಿ ಆಗೋಲ್ಲ.. ಅಷ್ಟು ದುಡ್ಡು ಇದೆ ಅವ್ರ್ ಹತ್ರ.

SHRADDHA is little confused but listening,

**SURI**
ಇಷ್ಟೆಲ್ಲಾ ದುಡ್ಡಿದ್ರು ಅವ್ನು ಮದುವೆ set ಆದ್ಮೇಲೆ ಏನ್ ಮಾಡ್ದ ಗೊತ್ತ.. 2kg ಚಿನ್ನ, ಒಂದ್ audi q5 ಮತ್ತೆ Tata Promont ಅಲ್ಲಿ ಒಂದ್ apartment, ವರಧಕ್ಷಣೆ ಕೇಳ್ದ.. ಬಡ್ಡಿ ಮಗಂಗೆ ಕಡಿಮೆ ಅಂದ್ರು 10 - 15 ಲಕ್ಷ ಬಾಡಿಗೆ ಬರುತ್ತೆ.. ಅಷ್ಟ್ ಇದ್ರೂನು ಮುಲಾಜ್ ಇಲ್ದೆ ವರಧಕ್ಷಣೆ ಕೇಳ್ದ. ಅದಕ್ಕಿಂತ ಮಜಾ ಇರೋ ವಿಷ್ಯ ಏನ್ ಗೊತ್ತ.. ಅವ್ನ ಮದುವೆ ಆಗಿದ್ ಹುಡುಗಿ ಅಪ್ಪ, ಖುಷಿಯಾಗಿ ಕೊಟ್ರು ಅವ್ನು ಕೇಳಿದ್ನೇಲ್ಲ.. PUC ನಾಲಕ್ ಸತಿ ಬರ್ದ್ರು, ಆಮೇಲೆ ಕಾಸ್ ಕೊಟ್ಟು ಪಾಸಾದವನು.. ಇವತ್ತು AUDI ಲಿ ಓಡಾಡ್ತಾನೆ.

SHRADDHA is patiently listening to SURI

**SURI**
ಅವ್ನು ಮದುವೆ ಆಗಿ ಎಷ್ಟ್ ವರ್ಷ ಆಯಿತು ಗೊತ್ತ.. 6 ವರ್ಷ. Already 4 ವರ್ಷದ್ ಮಗ ಇದಾನ ಒಬ್ಬ ಅವ್ನಿಗೆ.

Small pause

**SURI**
ನಿಜ ಹೇಳ್ಬೇಕಂದ್ರೆ ಎಲ್ಲ ದೊಡ್ದಾಗಿ dialogue ಹೊಡೀತಾರೆ dowry ತಗೋ ಬಾರ್ದು, ಕೊಡ್ಲು ಬಾರ್ದು, ಅಂತವ್ರೆಲ್ಲಾ ಯಾರ್ ಮದುವೆ ಆಗ್ತಾರೆ.. ಥು.. ಅಂತೆಲ್ಲ. ಆದ್ರೆ ವಾಸ್ತವ ಏನಂದ್ರೆ, ಆ dowry ತಗೋಳೋ MADHU ಅಂತ ಅವ್ರ್ಗೆ, ಹೆಣ್ಣು ಆರಾಮಾಗಿ ಕೊಡ್ತಾರೆ. ಅದೇ ನನ್ನ ಹಾಗೆ, ಕಷ್ಟ ಪಟ್ಟು, ಓದು ಮುಗ್ಸಿ, ಏನೋ ಒಂದ್ decent ಕೆಲ್ಸದಲ್ಲಿರೋ, self respect ಇರೋ ಅವ್ರಿಗೆ ಯಾರು ಹೆಣ್ಣು ಕೊಡೋಲ್ಲ. ಮದುವೆ ಆಗೋಕೆ ಹುಡ್ಗಿರು ಒಪ್ಪೋಲ್ಲ. ಹಾಗೂ ಹೀಗೂ ಮಾಡಿ ಕೊನೇಗ್ ಒಪಿಕೊಂಡವ್ರು, ಮದುವೆಗೆ ಒಂದ್ (MORE)

**SURI** (CONT'D)
ವಾರ ಇದ್ದಂಗೆ cancel ಮಾಡಿದ್ರೂ ಆಶ್ಚರ್ಯ ಇಲ್ಲ. ನಾನು 4 ವರ್ಷ ದಿಂದ ಹುಡುಗಿ ಹುಡುಕ್ತಾ ಇದೀನಿ. In fact I am an expert in the whole ಹೆಣ್ಣು ನೋಡೋ process. ಬೇಕಂದ್ರೆ thesis ಬರಿ ಬಹುದು, ಅಷ್ಟು ಕಲ್ತಿದೀನಿ.

SHRADDHA has patiently heard SURI'S rant. She smiles but she almost feels for the guy. She puts her hand on his shoulder and,

CUT TO

34. **INT. SURIS HOUSE HALL - EVENING**

SHRADDHA'S mom finishes her call and rests her head on her hand and is pressing her temple. SURI'S dad notices. He asks SHRADDHA'S dad,

**APPA**
Sir... madamಗೆ ಹುಷಾರಿಲ್ಲ ಅನ್ಸುತ್ತೆ.. ನೋಡಿ.

SHRADDHA'S DAD turns to see SHRADDHA'S mom stressed and evidently in pain. He walks up-to her and puts his arm around her and,

**DAD**
Geethaaa.. ಎಲ್ಲ okನಾ..

**MOM**
Haan ಸ್ವಲ್ಪ ತಲೆ ನೋವು ಅಷ್ಟೇ..

**DAD**
You look stressed.

SURI'S mom brings a glass of water for SHRADDHA'S mom and gives it to her.

**AMMA**
Tablets ಯಾವ್ದಾದ್ರು ಕೊಡ್ಲಾ.. crocin ಏನಾದ್ರು.

SHRADDHA'S mom smiling,

**MOM**
ಇಲ್ಲ ಇಲ್ಲ ಪರವಾಗಿಲ್ಲ.. I am ok.

SHRADDHA'S mom gets up from the dining room chair and starts walking back to the hall. SHRADDHA'S dad is walking behind her. All of a sudden she collapses and almost falls down when her husband gets a hold of her. She goes pale and is loosing her senses. SURI'S dad shouts for his wife. SURI'S mom comes running from the kitchen.

CUT TO

35. **INT. SURIS HOUSE BEDROOM - EVENING**

SHRADDHA'S dad is sitting next to his wife, who is lying on the bed. He has held her hand and is gently massaging her head with a lot of care.

SURI'S mom is seeing this and is almost feeling envious.

**MOM**
GIRI, ನನಿಗೊಂದ್ 15 ನಿಮಿಷ ಕೊಡು. ನೀನು,
SATHYA ಅವ್ರ್ ಜೊತೆ ಹೋಗಿ ಸ್ವಲ್ಪ ಹೊತ್ತು
ಮಾತಾಡ್ಕೊಂಡ್ ಕೂತ್ಕೋ.

**AMMA**
ನೀವು ಹೋಗಿ ನಾನಿಲ್ಲಿತೀನಿ..

SHRADDHA'S dad looks to his wife,

**DAD**
Sure ಅಲ್ವ..

SHRADDHA'S mom nods her head in approval. He and SURI'S dad who is standing at the door and watching, head out. ATTHE is sitting on a chair in the bedroom.

**ATTHE**
ಮೂರ್ ಹೊತ್ತು ಕೆಲಸ ಕೆಲಸ ಕೆಲಸ ಅನ್ಕೊಂಡ್ ಊಟ,
ನಿದ್ದೆ (MORE)

**ATTHE** (CONT'D)
ಎಲ್ಲ ಬಿಟ್ರೆ ಇನ್ನೇನ್ ಆಗುತ್ತೆ.. Lemon juice ಮಾಡಿ ಕೊಡು.. ಹುಷಾರ್ ಆಗ್ತಾಳೆ.

**AMMA**
ಹೌದಲ್ಲ.. ಮಾಡ್ಕೊಂಡ್ ಬರ್ತೀನಿರಿ.

**MOM**
ಅಯ್ಯೋ ಏನು ಬೇಡ.. ನಾನ್ ಆರಾಮಾಗೆ ಇದೀನಿ.

**AMMA**
ಐದು ನಿಮಿಷ ಅಷ್ಟೇ. ತಗೊಂಡ್ ಬರ್ತೀನಿರಿ.

She goes to the kitchen to make the juice.

36. **INT. KITCHEN - EVENING**

SURI'S mom walks into the kitchen and goes straight to the fridge. She takes the lemon out and closes the fridge. When she closes the fridge she sees an old picture of her and her husband stuck on the fridge. Its a candid photo and she looks happy and is laughing and has her head resting on her husbands shoulder and he too looks happy and laughing. She gets a little nostalgic and runs her hand on the picture. There is a sad smile on her face.

(Jump cuts of her making the juice)

Her hand first reaches the steel glass, she quickly moves it and picks up a GLASS and pours the juice into it.

CUT TO

37. **INT/EXT. TERRACE - EVENING**

SHRADDHA is looking at SURI and in an almost requesting tone,

**SHRADDHA**
SURI ನನಿಗೆ ಅರ್ಥ ಆಗ್ತಿದೆ SURI, ನೀನ್ ಹೇಳ್ತಿರೋದು.. ಆದ್ರೆ please.. understand my position too. ನಾನು (MORE)

**SHRADDHA** (CONT'D)
ಮದುವೆ cancel ಮಾಡೋಣ ಅಂತ ಹೇಳ್ತಿಲ್ಲ.. I am just asking...

A mildly agitated and sad SURI,

**SURI**
ಮತ್ತೆ ಇನ್ನೇನ್ ಹೇಳ್ತಿದಿಯ SHRADDHA ನೀನು.. cancel ಮಾಡೋಣ ಅಂತ ಹೇಳೋದ್ ಎಲ್ಲ ಹೇಳಿ ಈಗ...

There is a brief moment of silence. She gets up from where she is sitting and starts walking around the terrace and as she is walking.

**SHRADDHA**
ನೀನ್ dowry ತಗೋಳ್ತಿಲ್ಲಾ ಅನ್ನೋ ವಿಷ್ಯಾನ ಅಷ್ಟೊಂದೇನೂ ಹೊಗಳ್ಕೊಂಡ್ ಹೇಳ್ಕೋ ಬೇಡ SURI. ಮತ್ತೆ ಯಾವ್ದೋ, ಅಪ್ಪನ್ ದುಡ್ಡು ಬೇಕಾ ಬಿಟ್ಟ ಕರ್ಚ್ಮಾಡ್ಕೊಂಡು, ಜವಾಬ್ದಾರಿ ನೇ ಇಲ್ದೆ ಜೀವನ ಮಾಡ್ತಿರೋ spoilt rich brat ಜೊತೆ comapareಉ ಮಾಡ್ಕೋ ಬೇಡ.
You are much better than that and I genuinely mean it. ನನಗೆ ನಿನ್ ಬಗ್ಗೆ ಯಾವದೇ ಸಮಸ್ಯೆ ಇಲ್ಲ. Just that ನೀನು ಈಗ, ನಿನ್ನ ಜೀವನದಲ್ಲಿ ಈ ಮದುವೆ ಬೇಕು ಅಂತ ಹೇಗೆ sure ಇದಿಯೋ, ನಾನು ಅದೇ ರೀತಿ ನನಗೆ ಈಗ ಮದುವೆ ಬೇಡ ಅಂತ sure ಇದೀನಿ ಅಷ್ಟೇ..(thinks for a second). Or may be I am not sure but I am sure that I don't want it until I am sure.

**SHRADDHA**
Confusing?

**SURI**
ಹ್ಞೂ.. (MORE)

**SURI** (CONT'D)
ಸ್ವಲ್ಪ.. ಆದ್ರೆ ಮದುವೆ ಎಲ್ಲಾ fix ಆದ್ಮೇಲೆ ಈ ಥರ ಅನ್ನಿಸ್ತಿದೆ ಅಂದ್ರೆ.. ನಮ್ಮಪ್ಪ ಅಮ್ಮ ನೋಡು SHRADDHA.. ಪಾಪ ಅವ್ರಿಗೆ ಎಷ್ಟು tension ಇದೆಲ್ಲ..

**SHRADDHA**
ಹೌದು ನೀನ್ ಹೇಳ್ತಿರೋದು ಸರಿ ನೇ. ನನ್ನಿಂದ ನಿನಗೂ, ನಿನ್ familyಗು ತುಂಬ ಕಷ್ಟ ಆಗ್ತಿದೆ ಗೊತ್ತು.. And I am really very sorry. ಆದ್ರೆ ಇದೆಲ್ಲ ನಾನು ಬೇಕು ಅಂತ ಮಾಡಿದಲ್ಲ SURI. ನಮ್ ತಾಯಿ ನನಿಗೆ ತಲೆ ಕೆಡ್ಸಿ, confuse ಮಾಡ್ಸಿ, ಈ ಮದುವೆಗೆ ಒಪ್ಕೋಳೋ ಹಾಗ್ ಮಾಡಿದ್ದು.

Thinks for a while,

**SHRADDHA**
ನಿಜ ಹೇಳ್ಬೇಕಂದ್ರೆ ಅವರನ್ನ blame ಮಾಡಿನೂ ಏನು ಪ್ರಯೋಜನ ಇಲ್ಲ.

Getting a little nostalgic

**SHRADDHA**
ಅವ್ರು ತಂದೆ ಇಲ್ದೆ ಬೆಳ್ದಿದ್ದು.. ನಮ್ ತಾತ ಒಂದಿನ ನಮ್ ಅಜ್ಜಿ ಮತ್ತೆ ನಮ್ ತಾಯಿನ ಏನು ಕಾರಣ ಇಲ್ದೆ ಬಿಟ್ಟು ಹೊರಟು ಹೋದ್ರಂತೆ. ಆಗ್ಲಿಂದ ನಮ್ ತಾಯಿಗೆ ಗಂಡಸ್ರು ಅಂದ್ರೆ ನಂಬಿಕೆ ಇಲ್ಲ. She wants to be in control. Of everything. ಅವರಿಗೆ ನಾನು ಅವರ ಥರಾನೇ ಇರಬೇಕು ಅಂತ. In control of everything. Even the man I get married to.

SURI is attentively listening and is so engrossed that his eyes are still and there is serious frown on his unibrow.

**SHRADDHA**
And for some weird reason, ನಮ್ ತಾಯಿ ಪ್ರಕಾರ you were the perfect guy for me. ನನ್ನ control ಅಲ್ಲೇ ಇರ್ತೀಯ ನೀನು. ನಾನ್ ಹೇಳಿದೆಲ್ಲ ಕೇಳ್ತಿಯಾ ನೀನು ಅಂತ ಅವ್ರ ಅಭಿಪ್ರಾಯ.

A zapped SURI trying to process everything he has heard.

**SURI**
Ohhhhh ಇಷ್ಟೆಲ್ಲಾ scheme ಹಾಕಿದ್ರ ಅಮ್ಮ ಮಗಳು ಸೇರಿ.

**SHRADDHA**
ಆದ್ರೆ ನನಗದು ಬೇಡ SURI

**SURI**
ಮತ್ತೆ ಏನ್ ಬೇಕು ನಿನಗೆ

**SHRADDHA**
ನನಗೇನು ಬೇಕುಉುಉ (chuckles). ನನಿಗೆ ಗೊತ್ತಿಲ್ಲ SURI..

Thinks for a few seconds. Both are silent.

**SHRADDHA**
ಮದುವೆ ಸುತ್ತಾನೆ ಇಡೀ ಜೀವನ ನಿಂತಿರೋದು ಅನ್ನೋ ರೀತಿ ಯಾಕೆ behave ಮಾಡ್ತಾರೆ ಎಲ್ರು.. ಅದಷ್ಟೇ ಅಲ್ಲ SURI, ನನ್ನ life ನನ್ನ ಮದುವೆ ಬಗ್ಗೆ ನನಗಿಂತ ಚೆನ್ನಾಗಿ ಬೇರೆ ಎಲ್ಲರಿಗೂ ಗೊತ್ತಿರೋ ಹಾಗೆ advice ಮಾಡ್ತಾರೆ. ಇಡೀ life ಅಲ್ಲಿ ಒಂದು ಎರಡೇ ಬಾರಿ meet ಮಾಡಿರೋ ಅವ್ರು, ನಾನು ಯಾಕೆ 28 ತುಂಬೋದರ ಒಳಗೆ ಮದುವೆ ಆಗಿ ಮಗು ಮಾಡ್ಕೋ ಬೇಕು ಅನ್ನೋದರ ಬಗ್ಗೆ advice ಕೊಡ್ತಾರೆ.

SURI understands her frustration and smiles in agreement.

**SHRADDHA**
ಇಲ್ಲಿ ನನ್ನ lifeನೇ ಇನ್ನು ಸರೀಗೆ settle ಮಾಡ್ಕೊಂಡಿಲ್ಲ.. ಆಗ಼್ೇ ಒಂದ್ ಮಗು ಜವಾಬ್ದಾರಿ ತಗೋ ಬೇಕಂತೆ.. ನನಗೆ ಬುದ್ದಿ ಹೇಳೋಕೆ ಬರ್ತಾರಲ್ಲ ಬುದ್ದಿಇದ್ದೀಯ ಇವರಿಗೆಲ್ಲ.. Fuck them all. ಎಲ್ಲಿಗಾದ್ರೂ ಓಡಿ ಹೋಗೋಣ ಅನ್ಸುತ್ತೆ ಕೆಲವ ಸತಿ.

**SURI**
ನಡಿ ಹೋಗೋಣ.. ನಾನ್ ready..

They both look at each other and force a smile.

38. **INT. SURIS HOUSE BEDROOM - EVENING**

SHRADDHA'S MOM is drinking the lemon juice. SURI'S moms phone rings. The call is from MANAGER GOPI. She gestures 'one minute' to SHRADDHA'S MOM and opens the balcony door and steps out and answers the call.

**AMMA**
GOPI Sir ಹೇಳಿ. Sorry sir ಆಗ್ಲೇ ಸ್ವಲ್ಪ busy ಇದ್ದೆ.. ಅದಿಕ್ಕೆ answer ಮಾಡೋಕ್ ಆಗಿಲ್ಲ.

**GOPI (ANGRY VOICE)**
ಇವತ್ತೇನ್ ಅನಾಹುತ ಮಾಡಿದಾರೆ ಗೊತ್ತಾ ನಿಮ್ಮ ಹುಡುಗರು..

**AMMA**
ಏನಾಯಿತು sir?

**GOPI (VOICE)**
ಏನ್ ತಮಾಷೆ ಅನ್ಕೊಂಡಿದೀರಾ.. ಅಲ್ಲ veg ಊಟ ಕಳಿಸಬೇಕಿರೋ ಕಡೆ non veg ಕಳ್ಸಿದೀರಲ್ಲ.. ತಲೆ ಕೆಟ್ಟಿದಿಯ nimige.. Employees ಸುಮ್ನಿರ್ತಾರಾ.. ಇನ್ನೊಂದ್ ಸತಿ ಈ ಥರ ಆದ್ರೆ ನಿಮ್ contract cancel ಮಾಡಿಸ್ಬಿಡ್ತೀನಿ ಅಷ್ಟೇ..

SURI'S mom gets really angry when GOPI threatens. With an

angry loud tone,

**AMMA (ANGRY TONE)**

sir ಸ್ವಲ್ಪ ತಾಳ್ಮೆ ಇಂದ ಮಾತಾಡಿ. Contract
ಪ್ರಕಾರ ನಮ ಕೆಲಸ ಏನಿದ್ರೂ, veg, nonveg ಅಂತ
separate ಆಗಿ, label ಆಗಿರೋ tiffin
boxಗಳಲ್ಲಿ, ಕಳಿಸಿ ಕೊಡೋದು ಅಷ್ಟೇ..

SHRADDHA'S MOM has a view of SURI'S mom talking. She hears her handle the situation and is quite impressed with her.

**AMMA (ANGRY TONE)**

ಅಲ್ಲಿ employeesಇಗೆ, correctಆಗಿ ತಲ್ಪಿಸೋ
ಜವಾಬ್ದಾರಿ, ನಿಮ್ಮ house keeping ಹುಡುಗರದು,
ನನ್ ಹುಡುಗರದಲ್ಲ.. ಇಷ್ಟು ವರ್ಷದಲ್ಲಿ ಒಂದ್ ಸತಿನು
ನಮ್ ಕಡೆ ಇಂದ ಯಾವ ತಪ್ಪು ಆಗಿಲ್ಲ.. ಇವತ್ತು ಅಷ್ಟೇ,
ತಪ್ಪು ನಮ್ಮದಲ್ಲ.. ಸುಮ್ನೆ Contract ಕ್ಯಾನ್ಸಲ್
ಮಾಡ್ತೀನಿ ಅಂತೆಲ್ಲ ಹೇಳಿ ಹೆದರಿಸ ಬೇಡಿ sir..
ಮೊದ್ಲು ನಿಮ್ ಹುಡುಗರಿಗೆ ಬುದ್ಧಿ ಹೇಳಿ..

SURI'S mom hangs up and walks in and sits down. There is a brief moment of silence.

SHRADDHA'S mom to lighten the atmosphere,

**MOM**

ಈ ಮನೇಲಿ network ಸಿಗೋ ಇನ್ನೊಂದ್ ಜಾಗ ಇದೆ..

SURI'S MOM smiles sheepishly,

**AMMA**

hoon. ಯಾರಿಗೂ ಗೊತ್ತಿಲ್ಲ ಈ ಜಾಗದ್ ಬಗ್ಗೆ. ನಮ್ಮ
ಗಂಡಂಗೂ. ನಾನಿಲ್ಲಿ ಕೂತೆ ನಮ್ಮಕ್ಕ, ನನ್ನ friends
ಜೊತೆ ಎಲ್ಲ ಹರಟೆ ಹೊಡಿಯೋದು.

SHRADDHA'S MOM smiles. There is a pile of sweet boxes which are still not made into the shape of boxes. SURI'S mom sits down and starts making them into small boxes.

**MOM**
ಕೆಲಸ ಸರೀಗ್ ಆಗಿಲ್ಲ ಅಂದ್ರೆ ಕ್ಲಾಸ್ ತಗೋಳೋದು ಇಲ್ಲಿಂದ್ಲೇನಾ..

SURI'S MOM smiles,

**MOM**
ಏನಾದ್ರು serious problem ಆಗಿತ್ತ? call ಅಲ್ಲಿ ಸ್ವಲ್ಪ tension ಅಲ್ಲಿದ್ರಿ..

**AMMA**
ಇಲ್ಲ ಇಲ್ಲ serious ಏನು ಇಲ್ಲ. ಇದೆಲ್ಲ ಇದ್ದಿದ್ದೇ ಮಾಮೂಲಿ..

**MOM**
ಎಷ್ಟು ಜನ ಕೆಲಸ ಮಾಡ್ತಾರೆ..

**AMMA**
10 ಜನ.

**MOM**
Wow.

**AMMA**
hoon ಒಂದು 7 ವರ್ಷ ಆಯಿತು. ನಡೀತಿದೆ ಹೀಗೆ..

A surprised SHRADDHA'S MOM,

**MOM**
7 ವರ್ಷಾನಾ.. wowww

SURI'S mom smiles with pride.

**AMMA**
ನೀವೇನ್ ಕಮ್ಮಿನಾ.. ಒಂದ್ ಮೂವತ್ತು ವರ್ಶದಿಂದ ಕೆಲಸ ಮಾಡ್ತಿಲ್ವ ನೀವೂ..

**MOM**
Hoon.. ಅದಿಕ್ಕೆ ನೋಡಿ ಈ migraine ಎಲ್ಲಾ...

SHRADDHA'S mom keeps the glass on the side table.

**AMMA**
ನಿಮ್ husbandಗೆ ನಿಮ್ ಮೇಲೆ ತುಂಬ ಪ್ರೀತಿ ಅಲ್ಲ..

SHRADDHA'S MOM smiling in agreement. She is silent for a few seconds.

**MOM**
ಹೌದು.. ನಮ್ಮ ಮದುವೇ ಆದಾಗಿಂದಲೂ ಹಾಗೆ..
ತುಂಬ ಚೆನ್ನಾಗಿ ನೋಡ್ಕೊಂಡಿದಾರೆ ನನ್ನ.

She gets a little emotional and with some sense of introspection,

**MOM**
He has been a constant support..
ನನಿಗೂ ಅಷ್ಟೇ.. SHRADDHAಗು ಅಷ್ಟೇ. ನನಿಗೆ, ನನ್ನ
careerಗೆ, ನನ್ ಆಸೆಗಳಿಗೆ ಅಂತ ತುಂಬಾನೇ
sacrifice ಮಾಡಿದ್ದಾರೆ ಅವ್ರು.. SHRADDHA
ಹುಟ್ಟಿದ್ ಹೊಸ್ತ್ರಲ್ಲಿ, ಅವ್ರೆ ನೋಡ್ಕೊಂಡಿದ್ದು ಅವಳನ್ನ..

AMMA is listening in awe.

**MOM**
ಅವ್ರು ಈ corporate world ಅಲ್ಲಿ ಸಿಕ್ಕಿ
ಹಾಕೊಂಡಿಲ್ಲ.. Private practice.. ಅವ್ರಿಗೆ
ಅಂತ ಒಂದ್ ನಾಲ್ಕೈದು ಜನ clients, ಅಷ್ಟರಲ್ಲೇ
ಸಮಾಧಾನವಾಗಿದ್ರು. ಅವ್ರಿಗೆ writer ಆಗ್ಬೇಕು ಅಂತ
ತುಂಬ ಆಸೆ ಇತ್ತು ಮುಂಚೆ ಇಂದಾನು.. ಈಗ ಆ ಆಸೆನು
ತೀರಿಸ್ಕೊತಿದಾರೆ. ಎಲ್ಲ ಆದ್ಮೇಲೆ ಅವ್ರಿಗೆ teacher
ಆಗ್ಬೇಕು ಅಂತೇ.

**AMMA**
oh teacherಆ.. ಪುಣ್ಯದ್ ಕೆಲಸ ನೋಡಿ..

Both smile..

**MOM**
ನಿಮ್ husbandಉ ತುಂಬ ಹೆಮ್ಮೆ ಇಂದ ಹೇಳ್ಕೊಂಡ್ರಲ್ವ
ನಿಮ್ ಕೆಲ್ಸದ್ ಬಗ್ಗೆ..

SURI'S mom has a sad smile on her face.

**AMMA**
Hoon ಹೌದು.. ನನಿಗೂ ಆಶ್ಚರ್ಯ ಆಯಿತು..
ಖುಷಿನೂ ಆಯಿತು.. ನನ್ ಹತ್ರ ಯಾವತ್ತೂ
ಹೇಳ್ಕೊಂಡಿಲ್ಲ ಅವ್ರು..

AMMA reminiscing. She continues making the boxes. SHRADDHA'S MOM is observing the precision and ease in which SURI'S mom is making the boxes.

**AMMA**
ನಾವಿಬ್ರು ಜಾಸ್ತಿ ಮಾತೆ ಆಡೊಲ್ಲ.. ಹೇಳಿದ್ನಲ್ಲ, ಮಾತು
ಅಂತ ಆಡಿದಾಗ್ಲೂ ಅದು ಜಗಳ ಆಗಿರುತ್ತೆ..
ನೀವು ಹೇಳಿದ್ದು ನಿಜಾನೆ ಅನ್ಸುತ್ತೆ.. SURI ಮೇಲೂ
ಅದರ ಪರಿಣಾಮ ಬಿದ್ದಿರುತ್ತಲ್ವಾ.. ಅದು SHRADDHAಗು
ಗೊತ್ತಾಗಿರುತ್ತೆ.

SHRADDHA'S MOM is moved. The stack of boxes are increasing around SURI'S mom.

**AMMA**
ತುಂಬ ವರ್ಷ ಒಬ್ಬರಿಂದ ಒಬ್ರು ದೂರ ಇದ್ವಿ ಅದಿಕ್ಕೆ..

**MOM**
Oh ಹೌದ.. ಯಾಕೆ

**AMMA**
haan.. ಅವರ್ದು transfer ಆಗೋ ಕೆಲಸ..
ಎರಡ್ ವರ್ಷಕ್ ಒಮ್ಮೆ ಊರು ಬಿಡಬೇಕಾಗ್ತಿತ್ತು..
ಮದುವೆ ಆದ್ ಹೊಸ್ತ್ರಲ್ಲಿ, ನಾನು ಜೊತೆಗೆ ಹೋದೆ.
Delhi, Indore, Hyderabad ಹೀಗೆ ಹೊಸ (MORE)

**AMMA** (CONT'D)
ಹೊಸ ಊರು ನೋಡೋ ಅವಕಾಶ ಸಿಕ್ತು.. ಚೆನ್ನಾಗಿತ್ತು..
ಆದ್ರೆ SURI ಮತ್ತೆ ನನ್ ಮಗಳು SINDHU ಹುಟ್ಟಾದ್ಮೇಲೆ
ಈ ಹೊಸ ಊರಿಗೆ ಹೋಗೋ program ಕಷ್ಟ ಅನ್ನೋಕೆ
ಶುರು ಆಯಿತು.. ನನಿಗೂ ಅಷ್ಟೇ, ಮಕ್ಕಳಿಗೂ ಅಷ್ಟೇ..

SHRADDHA'S MOM nods her head in acknowledgement.

**AMMA**
ಅದಿಕ್ಕೆ ನಾನು, ಮಕ್ಳು ಬೆಂಗಳೂರಲ್ಲೇ ಇರೋದು..
ಯುವರೊಬ್ರೇ transfer ಅಂತ ಊರು ಸುತ್ತೋದು
ಅಂತ ತೀರ್ಮಾನ ಮಾಡಿದ್ವಿ.

SHRADDHA'S MOM is listening attentively also observing the way SURI'S mom is working.

**AMMA**
ಮೊದ್ಲು ಒಂದೆರಡ್ ವರ್ಷ ಕಷ್ಟ ಆಯಿತು.. ಆಮೇಲೆ
ಹಾಗೆ adjust ಅಗೋಯಿತು.. 20 ವರ್ಷ ಹೋಗಿದ್ದೆ
ಗೊತ್ತಾಗಿಲ್ಲ.. ನನಿಗೂ ನನ್ನ ಅವ್ರಿಗೂ, ದೂರ ಇರೋದೇ
ಒಂದ್ ರೀತಿ ಅಭ್ಯಾಸ ಆಗೋಯಿತು..

AMMA pauses and reminiscing with some sadness and regret,

**AMMA**
ಯಾವ ಮಟ್ಟಕ್ಕೆ adjust ಆಗಿದ್ವಿ ಅಂದ್ರೆ, ಯುವರು
retire ಆಗಿ ವಾಪಸ್ ಬಂದಾಗ, ನಾನು, SURI
ಮತ್ತೆ ಯುವರು ಒಬ್ಬರಿಗೊಬ್ಬರು ತಾಳ್ಮೆ ಇಂದ ಮಾತು
ಆಡಿಸ್ತಿರಲಿಲ್ಲ..

SHRADDHA'S MOM is listening to her and almost empathizing manner. SURI'S mom realize she has said too much.

**AMMA**
ಅಯ್ಯೋ sorry ತುಂಬ bore ಆಯಿತು ಅನ್ನುಸ್ತೆ
ನಿಮಿಗೆ..

**MOM**

ಅಯ್ಯೋ ಇಲ್ವೇ ಇಲ್ಲ.. ಎಲ್ಲರ familyಲು ಇರೋದೇ
ಅಲ್ವ ಇದೆಲ್ಲ..

**AMMA**

ಆದ್ರೆ, ಒಂದ್ ವಿಷ್ಯ ಹೇಳ್ತೀನಿ.. ನಮ್ SURI ತುಂಬ
ಒಳ್ಳೆ ಹುಡುಗ.. ಚಿಕ್ ವಯಸ್ಸಿನಿಂದ ತುಂಬ ಕಷ್ಟ
ಪಟ್ಟಿದಾನೆ..
ತುಂಬ ಚೆನ್ನಾಗಿ ನೋಡ್ಕೋ ತಾನೆ SHRADDHAನಾ..

**MOM**

ನನಿಗೆ SURI ಬಗ್ಗೆ ಏನು doubt ಇಲ್ಲ.. ನನಿಗೆ
guarantee ಇದೆ, ಅವನಿಗಿಂತ ಒಳ್ಳೆ
understanding ಇರೋ ಹುಡುಗ SHRADDHAಗೆ
ಸಿಗೋಲ್ಲ ಅಂತ..

SURI'S mom is happy to hear that. She smiles.

CUT TO

39. **INT/EXT. BALCONY - EVENING**

SURI'S dad and SHRADDHA'S dad are in the balcony. SURI'S dad is sitting on a recliner chair and looking at a squirrel running around on a wire. SHRADDHA'S dad is smoking leaning on the railing. He takes the last puff. Stubs out the cigarette and,

**DAD**

Sir ನೀವು ಸೇದೋಲ್ವಾ..

SURI'S DAD waves his hand,

**APPA**

ಇಲ್ಲ sir. ಬಿಟ್ಟೆ

SURI'S dad is still attentive towards the squirrel. There is a small bowl of masala peanuts on a small table. Both are munching on it as they are talking. SURI'S dad takes a handful of peanuts and walks in the direction where the squirrel is

running around.

**APPA**
ಮುಂಚೆ ಸೇದ್ತಿದ್ದೆ sir.. quarters ಅಲ್ಲಿದ್ದಾಗ..

He gets a little nostalgic,

**APPA**
ಒಬ್ನೇ ಇರ್ತಿದ್ನಲ್ಲಾ.. ಅವಾಗ cigaretteಉ,
ವಾರಕೊಮ್ಮೆ ಒಂದು pegಉ.. ಎಲ್ಲ ಇರ್ತಿತ್ತು..

SHRADDHA'S dad smiles. SURI'S dad puts the peanuts down for the squirrel to eat

**DAD**
Ohoo.. ಒಬ್ರೇ ಇದ್ರೂ enjoy ಅಂತೂ
ಮಾಡಿದೀರಾ.. ಮತ್ತೆ ಯಾಕೆ ಬಿಟ್ಟಿದ್ದು.

SURI'S dad puts the peanuts down for the squirrel to eat. He waiting observantly for the squirrel to come and eat the peanuts.

**APPA**
Haan ಅದು.. ಆಗ ನಾನ್ ಉಳ್ಕೊಂಡಿದ್ದ quarters
ಅಲ್ಲಿ ಒಂದು balcony ಇತ್ತು sir. ಹೆಚ್ಚು ಕಮ್ಮಿ ಇದೆ
ಥರ. ಅಲ್ಲಿ ಆರಾಮಾಗಿ ಕೂತ್ಕೊಂಡು ಸೇದ್ತಿದ್ದೆ.. ಒಂದಿನ
ಒಂದ್ ಅಳಿಲು ಬಂತು ಬಾಲ್ಕನಿಗೆ. ಅವ್ನು ಒಂದ್ ಸ್ವಲ್ಪ
ಹೊತ್ತು, ನನ್ನೇ ಗುರಾಯಿಸ್ಕೊಂಡು ನೋಡ್ದಾ.. ನಾನು
ಒಂದೆರಡು ಕಡ್ಲೆ ಬೀಜಾ ಹಾಕ್ದೆ.. ಅವ್ನು ಆರಾಮಾಗಿ
ತಿನ್ಕೊಂಡು ಒಂದ್ ಸ್ವಲ್ಪ ಹೊತ್ತು ಅಲ್ಲೇ ಓಡಾಡ್ಕೊಂಡು
ಹೋದ.. ಅದಾದ್ಮೇಲೆ ಅವಾಗ ಅವಾಗ ಬಾರೋಕೆ ಶುರು
ಮಾಡ್ದಾ.. ನಾನೂ ಕಡ್ಲೆ ಬೀಜಾ ಹಾಕ್ತಿದ್ದೆ.. ಹಾಗೆ ಒಳ್ಳೆ
friends ಆಗ್ಬಿಟ್ವಿ sir ಇಬ್ರು..

The squirrel comes and SURI'S dad is observing it eat,

**APPA**
ಒಂದ್ ದಿನ ಗಮನಿಸಿದೆ sir, ನಾನು cigarette
ಸೇದಿದ್ ದಿನ ಅವ್ನು ಬರ್ತಿರ್ಲಿಲ್ಲ.. ಅವ್ನು ಬರ್ದೇ ಇದಾಗ
ನನಿಗೆ ಬೇಜಾರ್ ಆಗೋದು.. ಅದಿಕ್ಕೆ cigarette
ಸೇದೋದನ್ನ ಕಮ್ಮಿ ಮಾಡ್ದೆ. ಹಾಗೆ ಕಮ್ಮಿ ಆಗಿ, ಆಗಿ,

The squirrel eats and leaves. He is reminiscing those days,

**APPA**
ಒಂದಿನ ಬಿಟ್ಟೆ-ಬಿಟ್ಟೆ..

SHRADDHA'S DAD smiles. SURI'S dad has an emotional smile on his face.

**DAD**
ಏನ್ ಒಂದ್ 20 ವರ್ಷ family ಇಂದ ದೂರ ಇದ್ರಿ
ಅನ್ಸುತ್ತಲ್ವಾ?

With some regret,

**APPA**
ಹೌದು sir.. ಕಷ್ಟ ಆಯಿತು ಸ್ವಲ್ಪ, ನನಿಗೂ ನಮ್
wifeಗು.. ಆದರೆ ಏನ್ ಮಾಡೋದು. ಮಕ್ಕಳಿಗೆ
ಒಳ್ಳೇದಾಗುತ್ತೆ ಅಂದ್ರೆ ಮಾಡ್ಲೆ ಬೇಕಲ್ಲ.. ನಾವ್ ಅವತ್ತು ಆ
ತೀರ್ಮಾನ ತಗೋಂಡಿದಕ್ಕೆ, ನಮ್ಮಕ್ಕಿಬ್ಬರು ಬೆಂಗಳೂರಲ್ಲೇ
ನಮ್ಮ ಸ್ವಂತ ಮನೇಲಿ ಬೆಳೆದ್ರೂ, ಒಳ್ಳೆ school
college ಅಲ್ಲಿ ಓದೋ ಹಾಗಾಯಿತು.. ಇವತ್ತು
ಇಬ್ಬರು ಒಳ್ಳೆ ಕೆಲಸದಲ್ಲಿದಾರೆ.. ನನ್ ಮಗಳು US ಅಲ್ಲಿ
settle ಆಗಿದ್ದಾಳೆ sir.. ಮತ್ತೆ ನಮ್ SURIನು
ಇಲ್ಲಿ ಒಳ್ಳೆ companyಲೇ ಇದಾನೆ.

Then with some regret and tears slowly forming.

**APPA**
ಆದ್ರೆ ಅಷ್ಟು ವರ್ಷ ದೂರ ಇದ್ದು ಇದ್ದು, ನಾನು ನಮ್ (MORE)

**APPA** (CONT'D)
missusಉ ಸ್ವಲ್ಪ ದೂರ ಆದ್ವಿ sir.. ಅವ್ಳು ತುಂಬ ambitiousಉ. ತುಂಬ ದೊಡ್ಡ ದೊಡ್ಡ ಕನಸುಗಳಿದ್ವು ಅನ್ಸುತ್ತೆ sir ಅವ್ಳಿಗೆ.. ಅವ್ಳು ಮದುವೆ ಮಾಡ್ಕೊಂಡಿದ್ ಹೊಸ್ತ್ರಲ್ಲಿ, ಸ್ವಲ್ಪ ದಿನ ಕಷ್ಟ ಇರುತ್ತೆ, ಆಮೇಲೆ life ಅರಾಮ್ ಆಗುತ್ತೆ ಅಂತ ಅನ್ಕೊಂಡಿದ್ಲು ಅನ್ಸುತ್ತೆ.. ಆದ್ರೆ ಹೋಗ್ತಾ ಹೋಗ್ತಾ, ಮನೆ ಕೆಲಸ, ಮಕ್ಳನ್ನ ನೋಡ್ಕೊಳೋದು, ಇಷ್ಟೇ ಆಗೋಯಿತಲ್ಲ ಜೀವನ ಅನ್ಸೋಕೆ ಶುರು ಆಯಿತು ಅವಳಿಗೆ.. ಅದು ಅಲ್ದೆ ನಾವಿಬ್ರು ಜೊತೆಗೂ ಇಲ್ಲ.. ಮಕ್ಕಳು ಸ್ವಲ್ಪ ದೊಡ್ಡವರಾಗ್ತಿದಂಗೆ, ಅವರೂ busy. ಅವರಿಗೆ ನಮ್ ಜೊತೆ ಮಾತಾಡೋಕು time ಇಲ್ಲ.. ಒಬ್ಳೆ ಆಗ್ಬಿಟ್ಲು ಅವ್ಳು.. ಆ ಕೋಪ ಈಗ್ಲೂ ಇದೆ sir ಅವಳಿಗೆ.

SHRADDHA'S DAD with a smile on his face,

**DAD**
Emotions ಅಂದ್ರೆ ಹಾಗೆ ರೀ, complicated. ನಿಮ್ regrets ಅರ್ಥ ಆಗುತ್ತೆ ನನಿಗೆ.. ಅವರಿಗೆ ಯಾಕೆ ಕೋಪ ಇದೆ ಅನ್ನೋದು ಅರ್ಥ ಆಗುತ್ತೆ..

Both smile in agreement.

**APPA**
ಅವ್ಳು catering service start ಮಾಡಿದ್ದು ಒಂದ್ ಒಳ್ಳೆ ಕೆಲಸ ಆಯಿತು ನೋಡಿ sir. ನನಿಗೆ ಈಗ್ಲೂ ನೆನಪಿದೆ ಅವ್ಳಿಗೆ ಮೊದಲ್ನೇ payment ಬಂದಾಗ ಅವ್ಳು ಎಷ್ಟು ಖುಷಿ ಆಗಿದ್ಲು ಅಂತ (teary eyed)..

With pride in his almost teary eyes,

**APPA**
ತುಂಬಾ ಹೆಮ್ಮೆ ಆಗುತ್ತೆ ಅವಳನ್ನ ನೋಡಿದ್ರೆ..

**DAD**
ಅವರಿಗೆ ಹೇಳಿದೀರಾ ಇದನೆಲ್ಲ..

SURI'S father doesn't say anything,

**DAD**
ಹೇಳ್ಬೇಕು ಅಲ್ವ?

SURI'S father smiles in agreement.

40. **INT/EXT. TERRACE - EVENING**

SHRADDHA is watering one of the pots. SURI is sitting on the hammock behind her and is calling someone. He hangs up frustrated,

**SURI (FRUSTRATED MURMUR)**
ಥು ಈ ಮನೇಲಿ networkಉ ಸಿಗೋಲ್ಲ..

SHRADDHA'S phone gets a notification. She takes her phone out. Its an NDTV app notification. She reads it,

**SHRADDHA (SHOCKED)**
Oh my god

**SURI**
ಏನಾಯಿತು!!!!

**SHRADDHA**
DHONI retirement announce ಮಾಡಿದ್ದಾನಂತೆ.. All forms of international cricket.

**SURI (SHOCKED EVEN MORE)**
ಏನುಉಉಉ!!!!

He comes close to her and he too is reading,

**SURI**
ಮೊನ್ ಮೊನ್ನೆ t20 world cup ಗೆದ್ದಿದಲ್ವಾ.. icc world cupಉ ಅಷ್ಟೇ, ಈಗ ಹೋದ್ ತಿಂಗ್ಳು ನಡ್ದಂಗ್ (MORE)

**SURI** (CONT'D)
ಅನ್ನಿಸ್ತಿದೆ ನಂಗೆ.. ಎಷ್ಟು memories ಕೊಟ್ಟಿದಾನೆ
ನಮ್ generationಗೆ..

**SHRADDHA**
hoon ಹೌದು.. ಮುಂಚೆ ನೇ retire ಆಗ್ಬಿಡ್ಬೇಕಿತ್ತು
ಅವ್ನು.. peak ಅಲ್ಲಿದ್ದಾಗ..

Looks to SURI and with amazement in her eyes,

**SHRADDHA**
ಅಪ್ಪ!!! ಹೌದು ನೀನ್ ಹೇಳ್ದಂಗೆ ಆ world cup
winning six ನನ್ ಕಣ್ ಮುಂದೆ ನಡ್ದಂಗ್
ನೆನಪಿದೆ..

Both look at each other and have sad smiles on their face.

**SURI**
ನಿನಿಗೆ cricket ಬಗ್ಗೆ ಇಷ್ಟೊಂದು interest ಇದೆ
ಅಂತ ಹೇಳೇ ಇಲ್ಲ..

Thinks for a while and with a sad smile,

**SHRADDHA**
ನಾವಿಬ್ರು ತುಂಬ ವಿಷ್ಯ ಒಬ್ರಿಗೊಬ್ರು ಹೇಳೋಕೊಂಡಿಲ್ಲ
ಅನ್ನೋದು ಇವತ್ತು ಗೊತ್ತಾಯಿತು SURI..

SURI doesn't say anything.

**SHRADDHA**
SURIII.. ಏನು ಮಾಡೋಣ ಈಗ..

SURI is now at the locked door and banging it and calling his dad.

Looks to her and,

**SURI**
DHONI retire ಆದ ಅಂತ ನಾವೇನ್ ಮಾಡೋಕ್
ಆಗುತ್ತೆ..

SHRADDHA looks at SURI with a, "WTF" expression. SURI too looks at her and then it flashes to him...

**SURI**
Ohhhh! ಈ door ಹೇಗ್ open ಮಾಡೋದು
ಅಂತಾನಾ.. door ಅಂತೂ open ಆಗೋಲ್ಲ..

Walks to the corner and pointing to a pipe,

**SURI**
ಇಲ್ಲಿ ಈ pipe ಹಿಡ್ಕೊಂಡು ಇಳಿದ್ರೆ, ಕೆಳಗಡೆ balcony
ಹೋಗಿ ಸೇರ್ತೀನಿ.

SHRADDHA is frustrated by now and,

**SHRADDHA (FRUSTRATED)**
SURIIIIIII. ನಾನು ನಮ್ ಬಗ್ಗೆ ಕೇಳ್ತಿರೋದು..
About us. About the wedding.

Its like SURI has had a reality check and with sad angry face

**SURI**
ನೀನ್ ಹೇಳು SHRADDHA..

SHRADDHA doesn't have a reply. She looks lost, confused and sad.

CUT TO

41. **INT/EXT. BALCONY - EVENING**

DAD trying to sound sarcastic,

**DAD**
ಅಪ್ಪ ಅಮ್ಮಂದಿರಾದ್ಮೇಲೆ ಇಷ್ಟೇ sir. ಕೆಲವರಿಗೆ ಮಕ್ಕಳು
ಯಾರು ಜೊತೆಗಿಲ್ಲ, U.S, foreign ಅಂತ (MORE)

**DAD** (CONT'D)
ದೂರ ಇದಾರೆ ಅನ್ನೋ ಕಷ್ಟ.. ಜೊತೆಗಿದವರದು,
ಬೇರೇನೇ ಕಷ್ಟ..

APPA reassuring,

**APPA**
ನಿಜ ಹೇಳಿದ್ರಿ sir.. ಅದಿಕ್ಕೆ ನಮ್ SURIಗೆ ಕೆಲವ್ ಸತಿ
ಹೇಳೋಣ ಅನ್ಸುತ್ತೆ, aye ಯಾಕೋ ಬೇಕು ಮದುವೆ
ಆರಾಮಾಗಿರೋ ಹೀಗೆ ಅಂತ..

Both laugh on that sarcastic comment of SURI'S dad.

**DAD (LAUGHING)**
ಜಗಳ ಆಡೊಂಕಾದ್ರು ಯಾರಾದ್ರೂ ಬೇಕಲ್ವಾ sir
ವಯಸ್ಸಾದ್ಮೇಲೆ..

**APPA (LAUGHING)**
ಅದು ಸರಿನೇ ಬಿಡಿ..

Takes a pause,

**APPA**
ನಿಜ ಹೇಳ್ಬೇಕಂದ್ರೆ ನಮ್ SURI ನಿಮ್ ಮಗಳ್
levelಗೇನಿಲ್ಲ ಬಿಡಿ.. ಅದವನಿಗೂ ಗೊತ್ತು ಅದಿಕ್ಕೆ
ಇಷ್ಟೊಂದ್ circus ಮಾಡ್ತಿರೋದು ಅವ್ನು..

Both laugh in agreement again. And then the expression on SHRADDHA'S DADs face changes. It looks like he cant believe what he is seeing. He points in the direction he is looking and then SURI'S dad, turns to see in that direction and sees SURI sliding down the pipe. He slides and jumps on to the balcony. Both are looking at SURI speechless,

**SURI**
Door lock ಆಗೋಯಿತು.. call ಮಾಡ್ದೆ ಆದ್ರೆ
ನಮ್ ಮನೆ network ಕಥೆ ಗೊತ್ತಲ್ವಾ.

**APPA**
Ohh.. ಸರಿ

SURI runs out in a hurry,

CUT TO

42. **INT. SURIS HOUSE - EVENING**

We see SURI running out. ATTHE is fully engrossed in her serial. PLUMBER BABU walks out of one of the bedrooms and comes to the hall. He looks around and sees no one and then stands in a position obstructing ATTHES view to the TV. ATTHE is getting irritated.

**BABU**
ಎಲ್ಲಿ ಎಲ್ರು.. ಯಾರು ಕಾಣಿಸ್ತಿಲ್ಲ

An irritated ATTHE,

**ATTHE**
ಅಲ್ಲಿ balcony ಅಲ್ಲಿದ್ದಾರಲ್ಲ..

BABU then sees SURI'S DAD.

**BABU (LOUDLY)**
Saaaar..

SURI'S DAD turns from the balcony. (There is a distance between the two but they can see each other.)

**BABU**
ಕೆಲಸ ಆಯಿತು.. ಎಲ್ಲ fix ಮಾಡಿದೀನಿ.. Auntyಗೆ ಹೇಳಿ.. ಹಾಗೆ ಒಂದ್ 500rs online transfer ಮಾಡಿಬಿಡಿ..

SURI'S DAD smiles awkwardly.

**APPA (MURMURING TO HIMSELF)**
Online paymentಆ!!!

He does a thumbs up to BABU.

ATTHE is getting irritated.

**ATTHE**

ಜರಿಗೋ ಸ್ವಲ್ಪ.. tv ನೋಡ್ತಿಲ್ವ ಇಲ್ಲಿ..

**BABU**

Ohhhh.. ಆಯಿತು ಹೊರಟೆ ಬಿಡಿ ನಾನು..

BABU walks out. SURI and SHRADDHA walk in the main door. They are talking something to each other. They come in and see ATTHE on the sofa watching a Kannada serial (may be mahabaharth). She is so engrossed in the serial she doesn't even notice SURI and SHRADDHA walking in,

(The scene on the tv can be highly dramatic scene from a Kannada serial and the ATTHE is reacting to it)

They both are surprised when they don't see anyone around.

**SHRADDHA**

Aunty.. ಎಲ್ಲಿದಾರೆ ಎಲ್ಲರೂ?

ATTHE then turns and looks to SURI,

**ATTHE**

Oh ಬಂದ್ರ ವಾಪಸ್ಸು.. ನಿಮಮ್ಮಂಗೆ ಏನೋ ತಲೆ ಸುತ್ತುತಿದೆ ಅಂತ ಒಳಗಡೆ ಮಲಗಿದಾರೆ..

Looks to SURI,

**ATTHE**

ನಿಮಮ್ಮ ಅಪ್ಪ್ ಜೊತೇನೆ ಕೂತಿದಾರೆ..

SHRADDHA is worried when she hears that and hurries towards the bedroom,

**SHRADDHA**

ಏನುಉಉಉ!!!

As they both head to the bedroom,

**ATTHE (VOICE)**
ನಿಮ್ ಅಪ್ಪಂದಿರ ಇಬ್ರು balcony ಅಲ್ಲಿದಾರೆ..

CUT TO

43. **INT/EXT. BALCONY/HALL - EVENING**

Both SURI'S dad and SHRADDHA'S dad walk back inside and they see SURI. SHRADDHA'S DAD sees SURI.

**SURI**
Uncle ಏನಾಯಿತು auntyಗೆ?

**DAD**
ಏನಿಲ್ಲಪ್ಪ ಸ್ವಲ್ಪ ತಲೆ ಸುತ್ತಿದೆ.. ಈಗ ಆರಾಮಾಗಿದಾಳೆ..

SHRADDHA'S MOM, SHRADDHA and SURI'S mom walk out. SURI sees them coming.. SHRADDHA'S MOM is convincing SHRADDHA she is alright,

**MOM**
I am fineee.

At this point everyones inside the house. SHRADDHA'S MOM looks towards her and asks,

**MOM**
ಏನ್ decide ಮಾಡಿದ್ರಿ ಇಬ್ರು..

SHRADDHA and SURI exchange looks. There is a brief moment of silence. Everybody is looking at each other. And with some hesitation,

**SHRADDHA**
ಅಮ್ಮ... ಈಗ ಮದುವೆ ಬೇಡ ಅಂತ decide ಮಾಡಿದ್ವಿ..

SURI'S mom and dad heave out a sigh of disappointment. SHRADDHA'S mom makes a sad face. Her dad pats on SHRADDHA'S shoulder assuring her its ok.

**SURI**
SHRADDHAಗೆ ಈಗ ಮದುವೆ ಬೇಡವಂತೆ.. ಒಂದ್
ವರ್ಷ time ಬೇಕಂತೆ..

Then looks to everyone and,

**SURI**
ನನಿಗೆ ಒಂದ್ ವರ್ಷ ಕಾಯೋಕೆ ಆಗೋಲ್ಲ...

ATTHE who was watching TV until now makes a dramatic entry and,

**ATTHE**
ಇನ್ನೊಂದ್ ವರ್ಷಾನಾ.. 34 ತುಂಬಿರತ್ತೆ ಅಷ್ಟ್ ಹೊತ್ತಿಗೆ
ನಿನಿಗೆ.. ಏನು..ತಾತ ಆಗೋ ವಯಸ್ಸಲ್ಲಿ ಅಪ್ಪ ಆಗೋ
planಆ ನಿಂದು?

She looks to both SURI'S mom and dad and,

**ATTHE**
ಎಲ್ಲರಿಗೂ ತಲೆ ಕೆಟ್ಟಿದಿಯ.. ಯಾಕೆ ಯಾರು ಏನು
ಹೇಳ್ತಿಲ್ಲ..

**SURI**
ಅತ್ತೆ ಸ್ವಲ್ಪ ಸಮಾಧಾನ.. ನನಿಗೆ ಒಂದ್ ವರ್ಷ ಕಾಯೋಕೆ
ಆಗೋಲ್ಲ ಅಂತ ಹೇಳಿದ್ದು..

Then murmuring to himself,

**SURI (MURMURING)**
ನನಿಗೆ ಅಪ್ಪ ಆಗ್ಬೇಕೋ ಬೇಡವೋ ಅನ್ನೋದೇ ಗೊತ್ತಿಲ್ಲ
ಇನ್ನು, ಆಗ್ಲೇ ನನ್ನ ತಾತ ಮಾಡೋಕ್ ಹೊರ್ಟಿದೀರಾ.

SURI'S mom walks up to him and holding his hand in a motherly affirmative manner.

**AMMA**
ಪರ್ವಾಗಿಲ್ಲ ಬಿಡೋ.. ಯಾವಾಗ್ ಆಗ್ಬೇಕೋ, ಆಗ
ಆಗುತ್ತೆ. ಚೆನ್ನಾಗೇ ಆಗುತ್ತೆ..

ATTHE goes back to her tv.

Both SURI'S dads and SHRADDHA'S moms phone start ringing. And they both are convincing each other to go answer their calls.

**APPA**
ನೀವ್ ಹೋಗಿ madam

**MOM**
ಇಲ್ಲ sir ನೀವ್ ಹೋಗಿ.. ನಂದು important call ಏನಲ್ಲ. ನೀವ್ ಆಮೇಲೆ ನನ್ ಜೊತೆ ಜಗಳ ಆಡಿದ್ರೆ ಕಷ್ಟ..

APPA laughing,

**APPA (LAUGHING)**
Hey ಇಲ್ಲ madam..

SLOW FADE OUT

SURI'S door bell rings. SURI opens the door,

**MAN AT THE DOOR**
Sir ನಿಮ್ cupboard handle ಕಿತ್ತೊಯಿತು ಅಂತ complaint ಮಾಡಿದ್ರಿ ಅಲ್ವ.. ಹೊಸ handle fix ಮಾಡೋಕೆ ಬಂದಿದೀನಿ sir..

FADE OUT TO BLACK

Few months later

44. **INT. SURIS OFFICE DESK - DAY**

SURI is at his desk at office. He is looking at his phone intently. He is looking at SHRADDHA'S contact saved in his phone. It is in edit mode and he is deciding whether to remove the WIFE from her contact name SHRADDHA-WIFE. He deletes E and F but he gets a little hesitant and stops. Somebody calls him so he leaves his phone on the table and leaves.

CUT TO

45. **INT/EXT. BALCONY OF A HIGHRISE - DAY**

SHRADDHA is standing in the balcony of a high rise office building in MUMBAI sipping on coffee. She seems to be deep in thoughts. She takes her phone out and opens her conversations with SURI on whatsapp. As she is scrolling down reading through her old messages she has a smile on her face when she see the picture of SURI and the cupboard. She starts typing a message.

I miss you SURI.

She deletes what she has typed.

She is called by someone. So she stops typing looks behind to the person calling and gestures 'one minute'. She again looks at her phone. She has a smile on her face but there is a rush of emotions too.

CUT TO

46. **INT. KITCHEN - DAY**

SURI'S mom is making chapatis in her kitchen for her tiffin service. SURI'S dad walks in,

**APPA**

ಏನಾದ್ರು help ಬೇಕಾ..

SURI'S mom looks back surprised.

**AMMA**

haan!!!

She is almost in loss of words.

**AMMA**

Hoon ಬನ್ನಿ.. ಸ್ವಲ್ಪ ಹಿಟ್ಟು ಕಲ್ಸೊಡ್ತೀರಾ?

APPA smiles and nods his head. SURI'S mom and dad are working together and are talking amongst themselves as they are working.

SLOW FADE OUT

**APPA**

ನಾವು, ಒಂದು trip ಹೋಗೋಣ್ವಾ. ತುಂಬ ವರ್ಷ ಆಯಿತಲ್ವಾ ಹೋಗಿ.

**AMMA**

hoon ಹೋಗೋಣ..

**ATTHE (VOICE)**

aye SATHYA ನನ್ inhaler ತಗೊಂಡ್ ಬಾರೋ.. ಉಸಿರಾಡೋಕೆ ಆಗ್ತಿಲ್ಲಾ..

APPA and AMMA look at each other and smile at the situation..

(Shots of the awkward smile on their face. Shots of their hands working. Them in close proximity of each other.)

FADE OUT TO BLACK

47. **INT. SHRADDHAS HOUSE - DAY**

SHRADDHA'S MOM is looking at herself in the mirror and applying her lipstick as she is getting ready to leave for work. Its evident from the way she is looking at herself that she some thoughts running in her head. She keeps her lipstick in the bag and walks out. She walks to her husbands study and stops at the door and looks at her husband. She takes a moment and looks at him with a lot of love. He is typing something on his laptop with complete concentration. He doesn't notice her looking at him. He is trying to focus on something.

**MOM**

GIRI..

He hears her. Turns to the door

**DAD**

Huh.

He smiles.

**DAD**

ಹೊರ್ಟಿಯಾ officege?

She smiles and nods a yes.

**DAD**
Byeee. Have a good day.

He continues with his typing. She is standing there looking at him.

**MOM**
GIRI..

He turns to her.

**MOM**
ಇವತ್ತು ಮನೆಗೆ ಬೇಗ ಬರ್ತೀನಿ.. Dinnerಗೆ ಹೊರಗ್ ಹೋಗೋಣ.. I want to celebrate you finishing the draft.

Dad shows a thumbs up sign.

**MOM**
I am very proud of you.

He smiles and acknowledges her appreciation. She sends him a kiss, waves a bye and leaves.

CUT TO

48. **INT. SURIS HOUSE - EVENING**

(We don't hear the ambient sound. Only music is heard)(slomo) SURI his mom and dad are seated on the sofa. There is a girl and her mom and dad seated on another sofa. They are talking amongst themselves. They all look happy. They are all dressed well. SURI'S mom and dad are gleaming in joy. Even ATTHE is smiling as she is talking to the girl's mom. (Some activity, may be they are going through an old album or something like that. Basically everyone looks happy)

SURI and the girl too are talking. She is showing him something on her phone. He cant see it clearly. So he goes and sits next to her. There is a nice chemistry between the two. The keep looking at each other stealing glances. They are in close proximity too.

(The music builds to a nice peak during this entire sequence

and then abruptly stops and we hear the message tone of SURI'S phone. We also hear the ambient sound now.)

SURI takes his phone out. Its a message from

SHRADDHA W: Hey Suri.. Long time.. How are you?

We see SURI'S face. The smile and enthusiasm on his face has slowly faded away. We go close to his face and we see the dilemma in his face.

CUT TO BLACK

END CREDITS ROLL